ವಿಷಯ: ಯುನಾನಿ ವೈದ್ಯಕೀಯ ಪದ್ಧತಿಯನ್ನು ಜನಪ್ರಿಯಗೊಳಿಸುವುದು

2499 (3192)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಯುನಾನಿ ಆಸ್ಪತ್ರೆಗಳೆಷ್ಟು?

ಆ) 1996-97ರಲ್ಲಿ ಈ ಆಸ್ಪತ್ರೆಗಳಿಗೆ ಔಷಧಾಲಯಗಳಿಗೆ ಬಂದ ರೋಗಿಗಳ ಸಂಖ್ಯೆ ಎಷ್ಟು?

ಇ) 1996-97ರಲ್ಲಿ ಯುನಾನಿ ಔಷಧಿಗಳಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣ ವೆಷ್ಟು?

ಈ) 1997-98ರಲ್ಲಿ ಹೊಸದಾಗಿ ಯುನಾನಿ ಆಸ್ಪತ್ರೆ: ಔಷಧಾಲಯಗಳನ್ನು ರಾಜ್ಯದಲ್ಲಿ ತೆರೆಯಲಾಗುವುದೇ?

ಉ) ಯುನಾನಿ ವೈದ್ಯಕೀಯ ಪದ್ಧತಿಯನ್ನು ಜನಪ್ರಿಯಗೊಳಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು; ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 10 ಯುನಾನಿ ಆಸ್ಪತ್ರೆಗಳಿವೆ.

ಆ) 1) ಆಸ್ಪತ್ರೆಗಳಿಗೆ ಬಂದ ಒಳ ರೋಗಿಗಳು - 1041

2) ಆಸ್ಪತ್ರೆಗಳಿಗೆ ಬಂದ ಹೊರ ರೋಗಿಗಳು - 2,31,483.

3) ಔಷಧಾಲಯಗಳಿಗೆ ಬಂದ ಹೊರ ರೋಗಿಗಳು - 3,77,544.

ಇ) ರಾಜ್ಯಮಟ್ಟದಲ್ಲಿ ಬರುವ 10 ಯುನಾನಿ ಆಸ್ಪತ್ರೆಗಳಿಗೆ 1996-97ನೇ ಸಾಲಿನಲ್ಲಿ ರೂ. 8.35 ಲಕ್ಷ ಹಣವನ್ನು ಔಷಧಿಗಾಗಿ ಬಿಡುಗಡೆ ಮಾಡಲಾಗಿದೆ. ಮತ್ತು ಜಿಲ್ಲಾ ಮಟ್ಟದಲ್ಲಿ ಬರುವ 43 ಯುನಾನಿ ಚಿಕಿತ್ಸಾಲಯಗಳಿಗೆ ಪ್ರತಿ ಚಿಕಿತ್ಸಾಲಯಕ್ಕೆ ರೂ. 18,000.00ರಂತೆ ಔಷಧಿಗಳಿಗಾಗಿ ಒದಗಿಸಲಾದ ಹಣ ರೂ. 7.74 ಲಕ್ಷ.

ಈ) ಜಿಲ್ಲಾ ಮಟ್ಟದ ಯೋಜನೆಗಳಡಿಯಲ್ಲಿ ಒಂದು ತಾಲ್ಲೂಕು ಮಟ್ಟದ ಯುನಾನಿ ಆಸ್ಪತ್ರೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 2 ಸರ್ಕಾರಿ ಯುನಾನಿ ಚಿಕಿತ್ಸಾಲಯಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಜಿಲ್ಲಾ ಕೇಂದ್ರಗಳಲ್ಲಿರುವ ಭಾರತೀಯ ವೈದ್ಯಪದ್ಧತಿಗಳು ಮತ್ತು ಹೋಮಿಯೋಪತಿ ಆಸ್ಪತ್ರೆಗಳಲ್ಲಿ ಯುನಾನಿ ವಿಭಾಗಗಳಿಲ್ಲದ ಕಡೆ ಹಂತ ಹಂತವಾಗಿ ಯುನಾನಿ ವಿಭಾಗಗಳನ್ನು ಪ್ರಾರಂಭಿಸಿ ಒಳ-ಹೊರ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆಯವ್ಯಯ ಲಭ್ಯತೆಯನ್ನು ಅವಲಂಬಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದ ಕಡೆ ಜನರಿಗೆ ಆರೋಗ್ಯ ಸೇವೆ ಒದಗಿಸಲು ಸರ್ಕಾರಿ ಯುನಾನಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುತ್ತದೆ. ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯದ ಬೋಧಕ ವರ್ಗ ಹಾಗೂ ವೈದ್ಯರುಗಳಿರುವ ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸಲಾಗುತ್ತಿದೆ.

ವಿಷಯ: ಅರೆಕಾಲಿಕ ಉಪನ್ಯಾಸಕರ ಕುರಿತು.

2504 (3610)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರುಗಳಿಗೆ ಮಾನ್ಯತೆ ಬಗ್ಗೆ ಕಡತವು ಸರ್ಕಾರದ ಹಂತದಲ್ಲಿದ್ದು ಇದುವರೆಗೂ ಮಾನ್ಯತೆ ಹಾಗೂ ವೇತನ ನೀಡದೇ ಇರಲು ಕಾರಣಗಳೇನು?

ಆ) ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ:ಇಡಿ-92-ಡಿಸಿಇ-96ದಿನಾಂಕ: 26-2-96 ಹಾಗೂ ದಿ: 21-8-96ರ ಆದೇಶಗಳನ್ವಯ ಅರ್ಹತೆ ಪಡೆದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರ ನೇಮಕಾತಿಯನ್ನು 1996-97ನೇ ಸಾಲಿಗೆ ಸಂಬಂಧಿಸದಂತೆ ಕಾಲೇಜು ಶಿಕ್ಷಣ ಆಯುಕ್ತರು ಅನುಮೋದಿಸುತ್ತಿದ್ದು, ಸಂಬಂಧಪಟ್ಟ ಕಾಲೇಜುಗಳಲ್ಲಿ ಅವರಿಗೆ ಅರೆಕಾಲಿಕ ಭತ್ಯೆ ಪಾವತಿ ಮಾಡಲಾಗುತ್ತಿದೆ.

ಆ) 1996-97ನೇ ಸಾಲಿನಲ್ಲಿ ಹೊಸದಾಗಿ ನೇಮಕಗೊಂಡ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ವಿಷಯ: ವೈದ್ಯರುಗಳಿಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು.

2505 (3892)